ಪೂರ್ವಕವಾಗಿ ಹೇಳಿದ.

'ನೀನು ಪೊಲೀಸ್ರ ಭಯದಿಂದ ಹಿಂಗೆ ಮಾತಾಡ್ತ ಇದೀಯ. ಆದ್ರೆ ನಂಗೆ ಯಾರ ಹೆದ್ರಿಕೆನೂ ಇಲ್ಲ. ಯಾರು ಬೇಕಾದ್ರೂ ಬ್ರಾಹ್ಮಣರಾಗ್ಬೋದು ಅಂತ ನಮ್ಮ ಶಾಲೆಯ ಬ್ರಾಹ್ಮಣ ಮೇಷ್ಟ್ರು ಯೋಳವ್ರೆ. ನಾನು ಜನಿವಾರ ಬಿಚ್ಚಕ್ಕಿಲ್ಲ' ಎಂದು ಖಡಾ ಖಂಡಿತವಾಗಿ ಹೇಳಿದ ಗೊದ್ಲೆ, ಕೌದಿಯ ಮೇಲೆ ಉರುಳಿಕೊಂಡ.

ಮುಳ್ಕಟ್ಟ ಸಿಟ್ಟು, ಅಸಹಾಯಕತೆಯಿಂದ ಸೀಮೆಎಣ್ಣೆ ಬುಡ್ಡಿಯನ್ನು 'ಉಫ್' ಎಂದು ನಂದಿಸಿ ಮಲಗಿದ.

ಬೆಳಿಗ್ಗೆ ಕೆರೆ ಹತ್ತಿರ ಹೋದ ಗೊದ್ಲೆ, ಬ್ರಾಹ್ಮಣರ ಜಾಗ ಬಿಟ್ಟು ಬೇರೆ ಕಡೆ ನೀರಿಗಿಳಿದು ಸೂರ್ಯನಿಗೆ ತರ್ಪಣ ನೀಡಿ, ಗಿಡ ಮರಗಳ ನಡುವೆ ಧ್ಯಾನ ಮಾಡಿದ.

2

'ಈ ದೇಶದಲ್ಲಿ ಅಂಬೇಡ್ಕರ್ ಹುಟ್ಟಾಗಿ ಹೊಲೇರಿಗೆಲ್ಲ ಹಲ್ಲು ಬಂದ್ವು. ಸಾಮಾಜಿಕ ನ್ಯಾಯ ಅಂತೆ, ಸಮಾನತೆ ಅಂತೆ, ಸಮಪಾಲಂತೆ. ತಗಳ್ಳಿ ಯಾರು ಬೇಡಾಂದ್ರು? ಆದ್ರೆ ಗೊದ್ಲೆ ಬ್ರಾಹ್ಮಣಿಕೆಯಲ್ಲೂ ಸಮ ಪಾಲು ತಗೋಳಕ್ಕೆ ಹೊಂಟವ್ನೆ. ಇದಕ್ಕೆ ಈಗಲೇ ಮಂಗಳ ಹಾಡದೇ ಹೋದ್ರೆ ಉಳ್ದೋರೂ ಜನಿವಾರ ಹಾಕ್ಕಂಡು ನಾನೂ ಬ್ರಾಹ್ಮಣ ಅಂತ ಹೇಳಕ್ಕೆ ಶುರು ಮಾಡಿ ಬಿಡ್ತಾರೆ'.

'ಅದಕ್ಕೆ ಏನು ಮಾಡ್ಬೇಕು ಅಂತೀಯ?'

ತನ್ನಪ್ಪ ಸುಬ್ಬರಾಯರ ಪ್ರಶ್ನೆಗೆ ಉತ್ತರ ಹೊಳೆಯದೆ ತುಂಟ ಬ್ರಾಹ್ಮಣ ಯುವಕ ಅತ್ತಿತ್ತ ಹೆಜ್ಜೆ ಹಾಕಿದವನು ಗಕ್ಕನೆ ನಿಂತು ಹೇಳಿದ.

'ಗೊದ್ಲೆ ಮಾಂಸ ತಿನ್ನೋಲ್ವಂತೆ. ಅವ್ನಿಗೆ ಮಾಂಸ ತಿನ್ಸಿ ಜನಿವಾರ ತೆಗಿಯಂಗೆ ಮಾಡ್ತೀನಿ'.

'ಜನಿವಾರ ಹಾಕ್ಕಂಡಿರೋ ಅವನಿಗೆ ಹೊಲಸು ತಿನ್ನಿಸಿದ್ರೆ ಆ ಪಾಪ ನಿನ್ನ ಸುತ್ತಿಕೊಳ್ಳುತ್ತೆ' ಎಂದರು ಸುಬ್ಬರಾಯರು.

'ಈ ಬಗ್ಗೆ ರಾಮಸ್ವಾಮಿ ಅವರ್ನ ಒಂದ್ಮಾತ್ ಕೇಳ್ತೀನಿ' ಅಂದವನು ಮನೆಯಿಂದ ಹೊರ ಬಿದ್ದ. ಅಲ್ಲಿಗೆ ಹೋದಾಗ ರಾಮಸ್ವಾಮಿ ತೂಗು ಮಂಚದಲ್ಲಿ ಪಂಚಾಂಗ ನೋಡುತ್ತ ಕುಳಿತಿದ್ದರು.

'ನಮಸ್ಕಾರ ಪಂಡಿತೋತ್ತಮರಿಗೆ' ಎಂದು ಕೈ ಮುಗಿಯುತ್ತ ಒಳ ಬಂದವನನ್ನು 'ಬಾರಯ್ಯ, ಏನ್ಸಮಾಚಾರ?' ಎಂದು ವಿಚಾರಿಸಿದರು.

'ಪಂಚಾಂಗ ನೋಡ್ತಾ ಇದ್ರಿ. ನಾನು ಬಂದಿದ್ದು ನಿಮ್ಮ ಕೆಲಸಕ್ಕೆ ತೊಂದರೆ ಆಯ್ತೇನೊ?'

'ಇಲ್ಲಯ್ಯ, ಗೊದ್ಲೆಯಿಂದಾಗಿ ಅಪವಿತ್ರವಾಗಿರೋ, ನಾವು ಸ್ನಾನ ಮಾಡ್ತಿದ್ದ ಜಾಗ ಮತ್ತು ಜಲವನ್ನ ಶುದ್ಧೀ ಮಾಡೋ ಪೂಜಾ ಕಾರ್ಯಕ್ಕೆ ಶುಭ ದಿನ ನೋಡ್ತಿದ್ದೆ'.

'ನಾನೂ ಅವ್ನ ವಿಷಯಾನೆ ಮಾತ್ನಾಡಕ್ಕೆ ಬಂದೆ' ಎಂದ. ಏನು ವಿಷಯ ಎಂಬಂತೆ ಅವನನ್ನು ಕತ್ತೆತ್ತಿ ನೋಡಿದರು ರಾಮಸ್ವಾಮಿ.

'ಜನಿವಾರ ತೆಗೀಬೇಕೂಂತ ಪಂಚಾಯ್ತಿ ಕಟ್ಟೇಲಿ ತೀರ್ಮಾನವಾದ್ರು, ನೀವು, ಜನಿವಾರ ತೆಗಿದೇ ಇದ್ರೆ ಪೊಲೀಸಿಗೆ ಕಂಪ್ಲೇಂಟ್ ಕೊಡ್ತೀನಿ ಅಂತ ಹೇಳಿದ್ರೂ ಗೊದ್ಲೆ ಜನಿವಾರ ತೆಗ್ದೇ ಇಲ್ಲ. ಅವ್ನು ಕೀಳು ಜಾತಿಯೋನು ಅನ್ನೋದು ಬಿಟ್ರೆ ಜನಿವಾರ ತೆಗ್ಸಾಕೆ ಬೇರೆ ಕಾರಣಗಳೇ ಇಲ್ಲ. ಮುಖ್ಯವಾಗಿ ಅವ್ನು ಮಾಂಸಾನೂ ತಿನ್ನೊಲ್ಲ. ಏನಾದ್ರೂ ಮಾಡಿ ಅವನಿಗೆ ಮಾಂಸ ತಿನ್ನಿಸಿದ್ರೆ ಜನಿವಾರ ತೆಗ್ಸೊ ನಮ್ಕೆಲ್ಸ ಸುಲಭವಾಗುತ್ತೆ ಅನ್ನೋದು ನನ್ನ ಅಭಿಪ್ರಾಯ. ಆದ್ರೆ ಜನಿವಾರ ಹಾಕ್ಕಂಡಿರೋ ಅವನಿಗೆ ಮಾಂಸ ತಿನ್ಸೋದು ಪಾಪದ ಕೆಲಸ ಅಂತ ನಮ್ತಂದೆ ಹೇಳಿದ್ರು. ತಿಳಿದೋರು ನೀವು, ನೀವೇನ್ ಹೇಳ್ತೀರಾಂತ ಕೇಳೋಕ್ಕೆ ಬಂದೆ' ಎಂದ.

'ಪಾಪಾನೊ ಕರ್ಮಾನೊ. ಈಗ ಅದ್ನೆಲ್ಲ ನೋಡ್ತಾ ಕುಂತ್ರೆ ಆಗಲ್ಲ. ಅದೇನ್ ಮಾಡ್ಬೇಕು ಅಂತಿದ್ದೀಯೋ ಅದನ್ನ ಮಾಡು. ಒಟ್ನಲ್ಲಿ ಅವನ ಮೈಯಲ್ಲಿ ಜನಿವಾರ ಇರಬಾರ್ದು ಅಷ್ಟೆ'.

* * *

ರಾಮಸ್ವಾಮಿ ಅವರ ಮಾತಿನಿಂದ ಹುರುಪುಗೊಂಡ ಯುವಕ ಅಲ್ಲಿಂದ ತನ್ನ ಮನೆಯ ಕಡೆ ಹೊರಟ. ಗೊದ್ಲೆಗೆ ಮಾಂಸ ತಿನ್ನಿಸಿ, ಜನಿವಾರ ತೆಗೆಸಿ ಅಗ್ರಹಾರದ ಮಂದಿಯಿಂದ ಶಹಬ್ಬಾಸ್‌ಗಿರಿ ಪಡೆಯಬೇಕೆಂಬ ಉತ್ಕಟತೆ ಅವನಲ್ಲಿ ಮೂಡಿತ್ತು. ಆದರೆ ಗೊದ್ಲೆಗೆ ಮಾಂಸ ತಿನ್ನಿಸೋದಾದರೂ ಹೇಗೆ? ಯಾರನ್ನ ಹಿಡ್ಕಂಡ್ರೆ ಈ ಕೆಲಸ ಆಗುತ್ತೆ ಎಂದು ಯೋಚಿಸುತ್ತಿದ್ದವನಿಗೆ ತನ್ನ ಮನೆಯ ಜೀತದಾಳು ಬೋಗಯ್ಯನ ನೆನಪಾಗಿ, ಈ ಕೆಲಸಕ್ಕೆ ಅವನೇ ಸರಿ ಎಂದು ತೀರ್ಮಾನಿಸಿದ.

ಮನೆಯ ಹಿಂಭಾಗದಲ್ಲಿರುವ ಕೊಟ್ಟಿಗೆಗೆ ಹೋದಾಗ, ಬೋಗಯ್ಯ ದನಗಳ ಗೊಂತಿಗೆ ಹುಲ್ಲಾಕುತ್ತಿದ್ದ. ಕಡು